**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

**O.S. No.257/2025**
**PW: 1**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 31.01.2026**

**ಪಾಟೀ ಸವಾಲು : 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಕೆ ಎಸ್ ಆರ್ ರವರಿಂದ**

1. 2 ಮತ್ತು 3 ನೇ ಪ್ರತಿವಾದಿಗಳು ನಮ್ಮ ಊರಿನವರು ಆಗಿರುತ್ತಾರೆ. ಸದರಿ ಪ್ರತಿವಾದಿಗಳು ಈ ದಾವೆಗೆ ಸಂಬಂಧಿಸಿರುವುದಿಲ್ಲ ಆದರೆ ಅವರು ನಮೊಂದಿಗೆ ಬಂದಿರುತ್ತಾರೆ. ದಾವಾ ಸ್ವತ್ತಿನಲ್ಲಿ ಮೊದಲಿಗೆ ಮನೆ ಇತ್ತು ಗಲಾಟೆ ಯಾದ ನಂತರ ಮನೆಯನ್ನು ಒಡೆದು ಹಾಕಿರುತ್ತಾರೆ. ಮನೆಯನ್ನು ಒಡೆದು ಹಾಕಿದ ಬಗ್ಗೆ ಪೋಲೀಸರಿಗೆ ದೂರನ್ನು ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಮನೆ ಇರಲಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯು ವಾಸಕ್ಕೆ ಯೋಗ್ಯವಾದ ಮನೆಯಾಗಿತ್ತು. ಸದರಿ ಮನೆಯಲ್ಲಿ ರಾಯಪ್ಪ ಎನ್ನುವವರು ವಾಸವಾಗಿದ್ದರು. ನಂತರ ನಮಗೆ ನೀಡಿರುತ್ತಾರೆ. ಸದರಿ ಮನೆಯಲ್ಲಿ ನಾವು ವಾಸಕ್ಕೆ ಹೋಗುವ ಪೂರ್ವದಲ್ಲಿಯೇ ಗಲಾಟೆ ಮಾಡಿ ಮನೆಯನ್ನು ಒಡೆದು ಹಾಕಿರುತ್ತಾರೆ. ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದು 15 ದಿನಗಳ ನಂತರ ನಾವು ವಾಸಕ್ಕೆ ಹೋಗಲು ಪ್ರಯತ್ನ ಪಟ್ಟಾಗ ಗಲಾಟೆಯಾಗಿರುತ್ತದೆ. ಸದರಿ ಮನೆಗೆ ವಿದ್ಯುತ್ ಸಂಪರ್ಕ ಇತ್ತು. ಆದರೆ ವಿದ್ಯುತ್ ಸಂಪರ್ಕ ಕುರಿತಂತೆ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ.

2. ಈ ದಾವೆಯಲ್ಲಿ 3 ದಾವಾ ಸ್ವತ್ತುಗಳು ಇರುತ್ತವೆ. ದಾವಾ ಸ್ವತ್ತುಗಳ ವಿಸ್ತೀರ್ಣವನ್ನು ಹಾಗೂ ಚೆಕ್ಕುಬಂದಿಯನ್ನು ನನಗೆ ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳನ್ನು ನಾನು ರಾಯಪ್ಪರವರಿಗೆ ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿಯವರಿಗೆ ದಾವಾ ಸ್ವತ್ತುಗಳು ಅವರ ಪೂರ್ವಜರಿಂದ ಬಂದಿರುತ್ತವೆ ಎಂದು ದಾಖಲಾತಿಗಳನ್ನು ಪಡೆದಿರುತ್ತೇನೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತುಗಳು ನನ್ನ ಮಾರಾಟಗಾರರಿಗೆ ಸಂಬಂಧಿಸಿರುವುದಿಲ್ಲ ಹಾಗೂ ಅವರಿಗೆ ಯಾವುದೇ ಮಾರಾಟದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಾಯಪ್ಪರವರ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ರಾಯಪ್ಪರವರ ತಂದೆ ಹೆಸರು ವೆಂಕಟಸುಬ್ಬಯ್ಯ ಎಂದರೆ ಸರಿ. ಸದರಿ ವೆಂಕಟಸುಬ್ಬಯ್ಯ ರವರಿಗೆ ರಾಯಪ್ಪ ಹಾಗೂ ಗೋಪಾಲಪ್ಪ ಎಂಬ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ದಾವಾ ಸ್ವತ್ತಿನ ಕುರಿತಂತೆ ವೆಂಕಟಸುಬ್ಬಯ್ಯ ನವರ ಮಕ್ಕಳ ಮಧ್ಯ ವಿಭಾಗವಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿಯವರಿಗೆ ದಾವಾ ಸ್ವತ್ತುಗಳನ್ನು ಹೊರುತುಪಡಿಸಿ ಬೇರೆ ಸ್ವತ್ತುಗಳು ಇರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಆದರೆ ಸ್ವತುಗಳ ವಿವರಗಳು ಗೊತ್ತಿರುವುದಿಲ್ಲ.

3. ರಾಯಪ್ಪ ಈ ಮೊದಲು 1 ನೇ ಪ್ರತಿವಾದಿಯ ವಿರುದ್ಧ ಅಸಲು ದಾವಾ ಸಂಖ್ಯೆ 570/2007 ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯು ಅರ್ಹತೆ ಮೇಲೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಜಾ ಆದೇಶದ ವಿರುದ್ಧ ರಾಯಪ್ಪ ರವರು ಆರ್.ಎ.ಸಂಖ್ಯೆ 264/2012 ಎಂಬ ಮೇಲ್ಮನವಿಯನ್ನು ಸಲ್ಲಿಸಿದ್ದರು ಹಾಗೂ ಸದರಿ ಮೇಲ್ಮನವಿಯು ಸಹಾ ಅರ್ಹತೆ ಮೇಲೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಈ ಮೇಲೆ ಹೇಳಿದ್ದ ದಾವೆ ಕುರಿತಾಗಿ ನಮೂದಿಸಿದ್ದರೂ ಸಹಾ ನಾನು ದಾವೆ ಕುರಿತಾಗಿ ನಮ್ಮ ವಕೀಲರ ಮೂಲಕ ಮಾಹಿತಿ ಪಡೆದಿರುವುದಿಲ್ಲ. ಸದರಿ ದಾವೆಯಲ್ಲಿ ದಾವಾ ಸ್ವತ್ತುಗಳು ರಾಯಪ್ಪರವರಿಗೆ ಸೇರಿರುವುದಿಲ್ಲ ಎಂದು ವಜಾ ಮಾಡಿದ್ದರೂ ಸಹಾ ನನಗೆ ಮೋಸ ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ರಾಯಪ್ಪರವರ ವಿರುದ್ಧ ಯಾವುದೇ ದೂರನ್ನು ದಾಖಲಿಸಿರುವುದಿಲ್ಲ.

4. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಗೆ ಸೇರಿದ್ದು ಹಾಗೂ ಅವರೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಶ್ರೀಮತಿ. ಪ್ರಮೀಳ ನನಗೆ ಪರಿಚಯ ಇರುತ್ತಾರೆ. ಸದರಿಯವರ ವಿರುದ್ಧ ನಾನು ಅಸಲು ದಾವಾ ಸಂಖ್ಯೆ 1117/2016 ಎಂದು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ಏಕಪಕ್ಷೀಯವಾಗಿ ಆದೇಶವಾಗಿರುತ್ತದೆ. ನಾನು ಸದರಿ ದಾವೆಯಲ್ಲಿ ಶ್ರೀಮತಿ. ಪ್ರಮೀಳ ರವರಿಗೆ ಉದ್ದೇಶ ಪೂರ್ವಕವಾಗಿ ನ್ಯಾಯಾಲಯದ ಸಮನ್ಸ್ ಜಾರಿಗೊಳಿಸದೇ ಏಕಪಕ್ಷೀಯವಾಗಿ ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಲ್ಲಿಸುವ ಸಮಯದಲ್ಲಿ 1 ನೇ ಪ್ರತಿವಾದಿ ಸಹಾ ನನಗೆ ತಕರಾರು ಮಾಡಿರುತ್ತಾನೆ. ಸದರಿ ದಾವೆಯನ್ನು ನಾನು 1 ನೇ ಪ್ರತಿವಾದಿ ಸಹಾ ವಿರುದ್ಧ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**